**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಬಾಗಲಕೋಟೆ, ಹಾವೇರಿ ಹಾಗೂ ಧಾರವಾಡ ಜಿಲ್ಲೆಗಳ ವ್ಯಾಪ್ತಿಯ, ತುಪ್ಪರಿ ಹಾಗೂ ಬೆಣ್ಣಿ ಹಳ್ಳಗಳ ನೀರಿನ ಸದ್ಬಳಕೆಗೆ ಚಿಂತನೆ – ಸಂತೋಷ ಲಾಡ್.**
- **ರಾಜ್ಯಾದ್ಯಂತ ಉತ್ತಮ ಮಳೆ; ನದಿಗಳ ಒಳ ಹರಿವಿನಲ್ಲಿ ಹೆಚ್ಚಳ, ಮುಂಜಾಗ್ರತೆ ವಹಿಸಲು ಮನವಿ.**
- **ಬಾಣಂತಿ ಮತ್ತು ಮಗುವಿನ ಆರೈಕೆಗಾಗಿ, ಕೃ ್ಣ ಕುಟೀರ; ಡಾಕ್ಟರ್ ನಾಗಲಕ್ಷ್ಮೀ ಚೌಧರಿ.**
- **ಆಕಾಶವಾಣಿ ಭದ್ರಾವತಿ ಕೇಂದ್ರಕ್ಕೆ, ವಜ್ರ ಮಹೋತ್ಸವ ಸಂಭ್ರಮ; ವಿಶೇಷ ಸರಣಿಗೆ ಶಿವಮೊಗ್ಗದಲ್ಲಿ ಇಂದು ಚಾಲನೆ.**

<><><>

**ಈಗ ವಾರ್ತೆಗಳ ವಿವರ**

<><><>

**ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನಲ್ಲಿ, ತುಪ್ಪರಿ ಹಳ್ಳ ಹಾಗೂ ಬೆಣ್ಣಿ ಹಳ್ಳದ ಪ್ರವಾಹದಿಂದ, ಹಾನಿಗೊಳಗಾದ ಗ್ರಾಮಗಳಾದ ಹನಸಿ, ಶಿರಕೋಳ ಹಾಗೂ ಬಳ್ಳೂರ ಗ್ರಾಮಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಶಾಸಕ ಎನ್.ಎಚ್.ಕೋನರೆಡ್ಡಿ ಹಾಗೂ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಅವರು ಭೇಟಿ ನೀಡಿ ಸ್ಥಿತಿಗತಿ ಪರಿಶೀಲಿಸಿದರು.**

**ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಲಾಡ್, ತುಪ್ಪರಿ ಹಳ್ಳ 65 ಕಿಲೋ ಮೀಟರ್ ಹಾಗೂ ಬೆಣ್ಣಿ ಹಳ್ಳ 140 ಕಿಲೋ ಮೀಟರ್ ಉದ್ದ ಹರಿದಿದೆ. ಹಳ್ಳದ ಹರಿವಿನಗುಂಟ, ಇಕ್ಕೆಲಗಳಲ್ಲಿ ಜಮೀನು, ಊರು–ಕೇರಿ ಹಾನಿ ಮಾಡುತ್ತಿದೆ. ವ್ಯರ್ಥವಾಗಿ ಹರಿಯುವ, ಎರಡೂ ಹಳ್ಳಗಳ ನೀರನ್ನು ಸಂಗ್ರಹಿಸಿ, ಸದ್ಬಳಕೆ ಮಾಡಿಕೊಳ್ಳಲು, ಯೋಜನೆ ರೂಪಿಸಲು, ಚಿಂತನೆ ನಡೆದಿದೆ ಎಂದರು.**

**ನವಲಗುಂದ ಶಾಸಕ ಎನ್.ಎಚ್.ಕೋನರೆಡ್ಡಿ ಮಾತನಾಡಿ, ಬಾಗಲಕೋಟೆ, ಹಾವೇರಿ, ಧಾರವಾಡ ಜಿಲ್ಲೆಗಳನ್ನು ಒಳಗೊಳ್ಳುವ, ಬೆಣ್ಣಿ ಹಳ್ಳವನ್ನು, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ.ಶಿವಕುಮಾರ, ನೀರಾವರಿಗೆ ಒಳಪಡಿಸಿ ಘೋಷಿಸಿದ್ದಾರೆ. ರಾಜ್ಯ ವಿಪತ್ತು ನಿರ್ವಹಣಾ ನಿಧಿ ಅಡಿ, ಸಾವಿರದ 6 ನೂರು ಕೋಟಿ ರೂಪಾಯಿಗೆ, ಡಿ.ಪಿ.ಆರ್. ಆಗಿದೆ ಎಂದರು.**

**ಮುಂಗಾರು ಮಳೆ ಬಲಗೊಳ್ಳುತ್ತಿದೆ. ರಾಜ್ಯಾದ್ಯಂತ ವ್ಯಾಪಕ ಮಳೆಯಾಗುತ್ತಿದೆ.**

<><><>

**ಶಿವಮೊಗ್ಗ ಜಿಲ್ಲೆಯ ಲಿಂಗನಮಕ್ಕಿ ಜಲಾಶಯದ ಒಳ ಹರಿವು, 5 ಸಾವಿರದ 5 ನೂರಾ 85 ಕ್ಯೂಸೆಕ್‌ನಷ್ಟಿದೆ.**

<><><>

ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ, ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ, ಮಾಂಜರಿ ಗ್ರಾಮದ ಮೂಲಕ ಕೃ ್ಣಾ ನದಿಗೆ, 960 ಕ್ಯೂಸೆಕ್ ನೀರು ಹರಿಬಿಡಲಾಗಿದೆ.

ಸದ್ಯ ಕೃ ್ಣಾ ನದಿಗೆ, 21 ಸಾವಿರದ 500 ಕ್ಯೂಸೆಕ್ ನೀರು ಹರಿದು ಬರುತ್ತಿದೆ ಎಂದು, ಬಾಗಲಕೋಟೆ ಜಿಲ್ಲೆ, ಜಮಖಂಡಿ ಉಪ ವಿಭಾಗಾಧಿಕಾರಿ ಸಂತೋ ’ ಕಾಮಗೌಡ ತಿಳಿಸಿದ್ದಾರೆ. ನದಿ ಪಾತ್ರದ ಜನ ಎಚ್ಚರವಹಿಸುವಂತೆ ಅವರು ಕೋರಿದ್ದಾರೆ.

<><><>

ಮಳೆಗಾಲದ ಸಂದರ್ಭದಲ್ಲಿ, ಸಿಡಿಲಿನಿಂದ ಸಾವು–ನೋವು ಹೆಚ್ಚಾಗಿ ಸಂಭವಿಸುವ, ದಕ್ಷಿಣಕನ್ನಡ ಜಿಲ್ಲೆ, ಸುಬ್ರಹ್ಮಣ್ಯ ಹಾಗೂ ಸುತ್ತಲಿನ ಪ್ರದೇಶದಲ್ಲಿ, ಮಿಂಚು ಪ್ರತಿಬಂಧಕ ವ್ಯವಸ್ಥೆ ಅಳವಡಿಸಲು, ಜಿಲ್ಲಾಡಳಿತ ಕ್ರಮ ಕೈಗೊಳ್ಳಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ, ಸಂಭವನೀಯ ಪ್ರಾಕೃತಿಕ ವಿಕೋಪ ನಿರ್ವಹಣೆ ಪೂರ್ವ ಸಿದ್ಧತಾ ಸಭೆ ನಡೆಸಿದ ಸಚಿವರು, ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಕಡಲ್ಕೊರೆತದ ಶಾಶ್ವತ ಪರಿಹಾರಕ್ಕೆ, 80 ಕೋಟಿ ರೂಪಾಯಿ ಮೊತ್ತದ ಯೋಜನೆಯೊಂದನ್ನು, ಬಂದರು ಇಲಾಖೆ ಸಿದ್ಧ ಪಡಿಸಿದೆ. ಈಗಾಗಲೇ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಬೆಂಗಳೂರಿನಲ್ಲಿ ಸಭೆ ನಡೆಸಿ, ಕ್ರಿಯಾ ಯೋಜನೆಗೆ ಕ್ರಮ ವಹಿಸಿದ್ದಾರೆ ಎಂದು, ಸಚಿವ ದಿನೇಶ್ ಗುಂಡೂರಾವ್ ನುಡಿದರು.

ಕೇಂದ್ರ ಸರ್ಕಾರ, ಕರ್ನಾಟಕ ಸರ್ಕಾರಕ್ಕೆ, ತೆರಿಗೆ ಪಾಲಿನ ಕಂತಿನ ರೂಪದಲ್ಲಿ, 5 ಸಾವಿರದ 96 ಕೋಟಿ 72 ಲಕ್ಷ ರೂಪಾಯಿ, ಸೋಮವಾರ ಬಿಡುಗಡೆ ಮಾಡಿದೆ.

15ನೇ ಹಣಕಾಸು ಆಯೋಗದ ಶಿಫಾರಸಿನಂತೆ, ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆಯಲ್ಲಿ, ಶೇಕಡ 41 ರಷ್ಟನ್ನು, ರಾಜ್ಯ ಸರ್ಕಾರಗಳಿಗೆ 14 ಕಂತುಗಳಲ್ಲಿ ಹಂಚಿಕೆ ಮಾಡಲಾಗುತ್ತದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ, ಎನ್.ಡಿ.ಎ. ಮೈತ್ರಿಕೂಟ ಸರ್ಕಾರದ, ನೂತನ ಸಚಿವರಿಗೆ, ಸೋಮವಾರ ಖಾತೆ ಹಂಚಿಕೆ ಮಾಡಲಾಗಿದೆ.

ರಾಜ್ಯವನ್ನು ಕೇಂದ್ರದಲ್ಲಿ ಪ್ರತಿನಿಧಿಸುವ, ನಿರ್ಮಲಾ ಸೀತಾರಾಮನ್ ಅವರಿಗೆ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಖಾತೆ ನೀಡಲಾಗಿದೆ.

ಎಚ್.ಡಿ.ಕುಮಾರಸ್ವಾಮಿ ಅವರಿಗೆ ಬೃಹತ್ ಕೈಗಾರಿಕೆ ಮತ್ತು ಉಕ್ಕು, ಪ್ರಲ್ಹಾದ್ ಜೋಶಿ ಅವರಿಗೆ ಗ್ರಾಹಕರ ವ್ಯವಹಾರ, ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಖಾತೆ, ವಿ.ಸೋಮಣ್ಣ ಅವರಿಗೆ ಜಲಶಕ್ತಿ ಮತ್ತು ರೈಲ್ವೆ ರಾಜ್ಯ ಖಾತೆ ಹಾಗೂ ಶೋಭಾ ಕರಂದ್ಲಾಜೆ ಅವರಿಗೆ ಸಣ್ಣ, ಅತೀ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ, ರಾಜ್ಯ ದರ್ಜೆ ಸಚಿವರ ಖಾತೆ ನೀಡಲಾಗಿದೆ.

<><><>

ಆಕಾಶವಾಣಿ ಭದ್ರಾವತಿ ಕೇಂದ್ರಕ್ಕೀಗ, ವಜ್ರ ಮಹೋತ್ಸವದ ಸಂಭ್ರಮ. ಕೇಂದ್ರ ಕಾರ್ಯಾರಂಭಿಸಿ, 60ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ.

ಶಿವಮೊಗ್ಗದ, ಕುವೆಂಪು ವಿಶ್ವವಿದ್ಯಾಲಯದ, ಡಾಕ್ಟರ್ ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಹಯೋಗದಲ್ಲಿ, ಆಕಾಶವಾಣಿ ಭದ್ರಾವತಿ ಕೇಂದ್ರ, ಪ್ರತಿ ಮಂಗಳವಾರ ಬೆಳಗ್ಗೆ 7 ಗಂಟೆ 15 ನಿಮಿಷಕ್ಕೆ, ಡಾಕ್ಟರ್ ಅಂಬೇಡ್ಕರ ಅವರ ಬರೆಹಗಳು ಮತ್ತು ಅವರಿಂದ ಪ್ರಭಾವಿತರಾದ ಸಾಧಕರ ಸಂದರ್ಶನ ಸರಣಿಯನ್ನು, ಪ್ರಸಾರ ಮಾಡಲಿದೆ.

52 ಸಂಚಿಕೆಗಳ ಈ ಕಾರ್ಯಕ್ರಮ ಸರಣಿ, ವರ್ಷ ಪೂರ್ತಿ ಪ್ರಸಾರವಾಗಲಿದೆ.

ಇಂದು ಬೆಳಗ್ಗೆ 7 ಗಂಟೆ 15 ನಿಮಿಷಕ್ಕೆ, ಕುವೆಂಪು ವಿಶ್ವವಿದ್ಯಾಲಯದ ಉಪ ಕುಲಪತಿ ಡಾಕ್ಟರ್ ಶರತ್ ಅನಂತಮೂರ್ತಿ ಅವರ ಮುನ್ನುಡಿಯೊಂದಿಗೆ, ಕಾರ್ಯಕ್ರಮ ಸರಣಿ ಆರಂಭವಾಗಲಿದೆ.

<><><>

ಬಾಣಂತಿ ಮತ್ತು ಮಗುವಿನ ಆರೋಗ್ಯ ಮತ್ತು ಆರೈಕೆಗಾಗಿ, ರಾಜ್ಯ ಸರ್ಕಾರ ಕೃ ್ಣ ಕುಟೀರ ನಿರ್ಮಿಸಿದೆ ಎಂದು, ಮಹಿಳಾ ಆಯೋಗದ ಅಧ್ಯಕ್ಷೆ ಡಾಕ್ಟರ್ ನಾಗಲಕ್ಷ್ಮೀ ಚೌಧರಿ ಹೇಳಿದ್ದಾರೆ.

ತುಮಕೂರು ಜಿಲ್ಲೆ, ಕೊರಟಗೆರೆ ತಾಲೂಕು, ತೋವಿನಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಬಿಸಾಡಿಹಟ್ಟಿ ಗ್ರಾಮದಲ್ಲಿ, ಮೌಢ್ಯಾಚರಣೆ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಅವರು, ಭಾಗವಹಿಸಿ ಮಾತನಾಡಿದರು.

ಕೃಷ್ಣ ಕುಟೀರದಲ್ಲಿ ಬಾಣಂತಿಯರಿಗೆ ಅಗತ್ಯವಾದ ಬಿಸಿ ನೀರು, ಶುದ್ಧ ಕುಡಿಯುವ ನೀರು ಮತ್ತು ಇತರೆ ಮೂಲ ಸೌಕರ್ಯಗಳು ದೊರೆಯುತ್ತಿವೆ. ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ, ಅಗತ್ಯ ಮೂಲ ಸೌಕರ್ಯ ಒದಗಿಸುವುದು, ಆಯೋಗದ ಮೊದಲ ಆದ್ಯತೆ ಎಂದರು.

<><><>

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಮಾಸಾಂತ್ಯದೊಳಗೆ, ಚಿರತೆ ಸಫಾರಿ ಆರಂಭಿಸಲು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ವಿಕಾಸ ಸೌಧದ ತಮ್ಮ ಕಾರ್ಯಾಲಯದಲ್ಲಿ, ಮೃಗಾಲಯ ಪ್ರಾಧಿಕಾರದ 156ನೇ ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ಮೃಗಾಲಯದ ವನ್ಯ ಪ್ರಾಣಿಗಳ ಆರೈಕೆ ಮತ್ತು ನಿರ್ವಹಣೆಯ ಕುರಿತಾಗಿ, ಡಿಪ್ಲೊಮಾ ಕೋರ್ಸ್‌ಗಳ ಆರಂಭಕ್ಕೆ, ಅನುಮೋದನೆ ನೀಡಿದ್ದಾಗಿ, ತಿಳಿಸಿದರು.

ಧಾರವಾಡದ, ಎನ್.ಎ.ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯ ವಿದ್ಯಾರ್ಥಿ, 14 ವರ್ಷದ ವಿಜಯ್ ಅರಳಿಕಟ್ಟಿ, ರಾಷ್ಟ್ರೀಯ ಯೋಗ ಒಲಿಂಪಿಯಾಡ್ ಸ್ಪರ್ಧೆಯಲ್ಲಿ, ಪ್ರಥಮ ಸ್ಥಾನ ಪಡೆದು, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

<><><>

ಧಾರವಾಡದ ಪ್ರತಿಭಾವಂತ ಯುವ ಫುಟ್ಬಾಲ್ ಆಟಗಾರ, ಗಣೇಶ್ ರೆಡ್ಡಿ ಅವರು, 19 ವರ್ಷ ವಯೋಮಿತಿಯೊಳಗಿನ ಗೋಲ್ ಕೀಪರ್ ಆಗಿ, ಬೆಂಗಳೂರಿನ ಪ್ರತಿಷ್ಠಿತ ಸ್ಟೇಡಿಯಂ ಫುಟ್ಬಾಲ್ ಕ್ಲಬ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

<><><>

ಅಗ್ನಿವೀರ್ ಪುರುಷ ಅಭ್ಯರ್ಥಿಗಳ ನೇಮಕಾತಿ ಜಾಥಾ, ಇದೇ 27 ರಿಂದ ಜುಲೈ 2ರ ವರೆಗೆ, ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಮೈದಾನದಲ್ಲಿ, ನಡೆಯಲಿದೆ ಎಂದು ಭಾರತೀಯ ಸೇನೆ ತಿಳಿಸಿದೆ.

ಈಗ ಸಂಕ್ಷಿಪ್ತ ಸುದ್ದಿಗಳು:

ಧಾರವಾಡದ ಎಸ್.ಡಿ.ಎಂ. ಅಭಿಯಾಂತ್ರಿಕ ವಿಶ್ವವಿದ್ಯಾಲಯದಲ್ಲಿ, ಇಂದು ಮಂಗಳವಾರ ಬೆಳಗ್ಗೆ 10.30ಕ್ಕೆ, ಸಿಇಟಿ ಹಾಗೂ ಕಾಮೆಡ್-ಕೆ ಪ್ರವೇಶ ಪ್ರಕ್ರಿಯೆ ಬಗ್ಗೆ, ಇಂಜಿನಿಯರಿಂಗ್ ಆಕಾಂಕ್ಷಿಗಳಿಗೆ, ತಜ್ಞರು ಮಾರ್ಗದರ್ಶನ ಮಾಡುವರು.

ಇದೇ 21 ರಂದು, ವಿಶ್ವ ಯೋಗ ದಿನದ ಹಿನ್ನೆಲೆ, ಚಿತ್ರದುರ್ಗ ಜಿಲ್ಲಾದ್ಯಂತ, ಹತ್ತು ದಿನಗಳ ಯೋಗೋತ್ಸವ ಆಯೋಜಿಸಲಾಗಿದೆ ಎಂದು, ಜಿಲ್ಲಾ ಆಯು ್ ಅಧಿಕಾರಿ ಚಂದ್ರಕಾಂತ ನಾಗಸಮುದ್ರ ತಿಳಿಸಿದ್ದಾರೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ನೀಡುವ, ಶೂನ್ಯ ಬಡ್ಡಿ ದರದ ಸಾಲ ಸೌಲಭ್ಯವನ್ನು, ಕೃಷಿಕರು ಪಡೆದುಕೊಳ್ಳಬೇಕೆಂದು, ದಾವಣಗೆರೆ ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ, ಡಾಕ್ಟರ್ ಜೆ.ಆರ್. ಣ್ಮುಖಪ್ಪ ಕೋರಿದ್ದಾರೆ.

ಕೋಲಾರ ವ್ಯಾಪ್ತಿಯ, ರಾಜ್ಯ ಹೆದ್ದಾರಿಯಲ್ಲಿ 16 ಮಂದಿ, ಜಿಲ್ಲಾ ಮತ್ತು ಗ್ರಾಮೀಣ ರಸ್ತೆಗಳ ಅಪಘಾತದಲ್ಲಿ, 24 ಜನ ಮರಣ ಹೊಂದಿದ್ದಾರೆ. 117 ಜನರಿಗೆ ಗಾಯಗಳಾಗಿವೆ ಎಂದು, ಕೆ.ಜಿ.ಎಫ್. ಪೊಲೀಸ್ ವರಿಷ್ಠಾಧಿಕಾರಿ ಶಾಂತರಾಜ್, ತಿಳಿಸಿದ್ದಾರೆ.

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಬಾಗಲಕೋಟೆ, ಹಾವೇರಿ ಹಾಗೂ ಧಾರವಾಡ ಜಿಲ್ಲೆಗಳ ವ್ಯಾಪ್ತಿಯ, ತುಪ್ಪರಿ ಹಾಗೂ ಬೆಣ್ಣೆ ಹಳ್ಳಗಳ ನೀರಿನ ಸದ್ಬಳಕೆಗೆ ಚಿಂತನೆ – ಸಂತೋಷ ಲಾಡ್.
- ರಾಜ್ಯಾದ್ಯಂತ ಉತ್ತಮ ಮಳೆ; ನದಿಗಳ ಒಳ ಹರಿವಿನಲ್ಲಿ ಹೆಚ್ಚಳ, ಮುಂಜಾಗ್ರತೆ ವಹಿಸಲು ಮನವಿ.
- ಬಾಣಂತಿ ಮತ್ತು ಮಗುವಿನ ಆರೈಕೆಗಾಗಿ, ಕೃ ್ಣ ಕುಟೀರ; ಡಾಕ್ಟರ್ ನಾಗಲಕ್ಷ್ಮೀ ಚೌಧರಿ.

- **ಆಕಾಶವಾಣಿ ಭದ್ರಾವತಿ ಕೇಂದ್ರಕ್ಕೆ, ವಜ್ರ ಮಹೋತ್ಸವ ಸಂಭ್ರಮ; ವಿಶೇಷ ಸರಣಿಗೆ ಶಿವಮೊಗ್ಗದಲ್ಲಿ ಇಂದು ಚಾಲನೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>